ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 104-108
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬೌದ್ಧ ಧರ್ಮ ಮತ್ತು ಡಾ.ಶರಣಬಸಪ್ಪ ಅಪ್ಪ ಅವರ ದಾಸೋಹ ಸೂತ್ರಗಳು

**ಡಾ. ಮಹದೇವಪ್ರಸಾದ್ ಎಸ್. ಎಸ್**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು, ಮೈಸೂರು ಜಿಲ್ಲೆ

***Abstract:***
*ಈ ಲೇಖನವು ಬೌದ್ಧ ಧರ್ಮದ ಮಾನವೀಯ ಮೌಲ್ಯಗಳು ಹಾಗೂ ಡಾ. ಶರಣಬಸಪ್ಪ ಅಪ್ಪ ಅವರ ದಾಸೋಹ ಸೂತ್ರಗಳ ನಡುವಿನ ಸಂಬಂಧವನ್ನು ವಿಶ್ಲೇಷಿಸುತ್ತದೆ. ಬೌದ್ಧ ಧರ್ಮ ಪ್ರತಿಪಾದಿಸುವ ಕರುಣೆ, ಸಮಾನತೆ, ಅಹಿಂಸೆ ಮತ್ತು ಸೇವಾಭಾವಗಳು ದಾಸೋಹ ಪರಂಪರೆಯೊಂದಿಗೆ ಹೊಂದಿರುವ ಸಾಮ್ಯತೆಯನ್ನು ಇಲ್ಲಿ ಗುರುತಿಸಲಾಗಿದೆ. ದಾಸೋಹದ ಮೂಲಕ ಹಸಿವು, ಅಸಮಾನತೆ ಮತ್ತು ಸಾಮಾಜಿಕ ಭೇದಭಾವಗಳನ್ನು ನಿವಾರಿಸುವ ಪ್ರಯತ್ನಗಳು ಬೌದ್ಧ ಧರ್ಮದ ಕರುಣೆ ಮತ್ತು ಸಮಾನತೆಯ ತತ್ತ್ವಗಳೊಂದಿಗೆ ಹೇಗೆ ಸಂಬಂಧಿಸುತ್ತವೆ ಎಂಬುದನ್ನು ಲೇಖನ ಪರಿಶೀಲಿಸುತ್ತದೆ. ಒಟ್ಟಾರೆಯಾಗಿ, ಬೌದ್ಧ ಧರ್ಮದ ಮಾನವತಾವಾದಿ ಚಿಂತನೆ ಮತ್ತು ದಾಸೋಹ ಸೂತ್ರಗಳು ಸಮಾನತೆ, ಸೇವೆ ಹಾಗೂ ಸಾಮಾಜಿಕ ಸೌಹಾರ್ದವನ್ನು ಬೆಳೆಸುವ ಮೌಲ್ಯಾಧಾರಿತ ಚಿಂತನೆಗಳಾಗಿವೆ ಎಂಬುದನ್ನು ಲೇಖನ ಪ್ರತಿಪಾದಿಸುತ್ತದೆ.*

***Keywords:*** *ಬೌದ್ಧ ಧರ್ಮ, ದಾಸೋಹ, ಡಾ. ಶರಣಬಸಪ್ಪ ಅಪ್ಪ, ಕರುಣೆ, ಮಾನವೀಯತೆ.*

**ಪೀಠಿಕೆ**

ಶರಣಪರಂಪರೆಯಲ್ಲಿ ಮೂಡಿಬಂದಿರುವ ಪೂಜ್ಯ ಡಾ.ಶರಣಬಸಪ್ಪ ಅಪ್ಪ ಅವರು ಸಾಂಸ್ಕೃತಿಕ ಮತ್ತು ಸಾಹಿತ್ಯಕ ಬೆಳೆವಣಿಗೆಗಾಗಿ ಹಗಲಿರುಳು ದುಡಿಯುತ್ತ ಬಂದಿರುವ ದಾಸೋಹಿಗಳು. ಅವರು ತಮ್ಮ ಜೀವನದಲ್ಲಿ ಕಂಡುಂಡ ಜೀವನಾಮೃತವನ್ನು ಸಾಮಾನ್ಯ ಜನತೆಗೆ ಉಣಬಡಿಸಿದವರು. ಈ ಸಂದರ್ಭದಲ್ಲಿ ಪೂಜ್ಯರು ಮಾಡಿದ ಸೇವೆ ಅನನ್ಯ. ಅಂತೆಲೆ ಕಲಬುರ್ಗಿಯ ಕಣ್ಣು ತೆರೆಸಿದ ಶರಣ ಬಸವೇಶ್ವರ ಮಾಡಿದ ಸೇವೆ ಅನನ್ಯ. ಜೀವನ ತತ್ವಾದರ್ಶನಗಳನ್ನು ಜನಮನದಲ್ಲಿ ಉಳಿದು ಬೆಳೆಯುವಂತೆ ಮಾಡಿದವರೆಂದರೆ ಪೂಜ್ಯಶ್ರೀ ಡಾ.ಶರಣಬಸಪ್ಪ ಅಪ್ಪರವರೆಂದು ಹೇಳಿದರೆ ಅತಿಶಯೋಕ್ತಿ ಎನಿಸಲಾರದು. ಸಕಲ ಜೀವಾತ್ಮರ ಕುರಿತಂಥ ಅವರ ಚಿಂತನ, ಮಂಥನಗಳ ಮೂಲಕ ಮೂಡಿಬಂದ ಸ್ಫಟಿಕದ ಸಲಾಕೆ ಮತ್ತು ಮುತ್ತಿನ ಹಾರದಂತಿರುವ ಮಹಾದಾಸೋಹ ಸೂತ್ರಗಳು ಸಾಲು ದೀಪಗಳಾಗಿ ಜನಜೀವನಕ್ಕೆ ಬೆಳಕಿನ ಪ್ರಭೆಯನ್ನು ಸ್ಫುರಿಸುತ್ತಿರುವುದು ನಮ್ಮೆಲ್ಲರ ಭಾಗ್ಯವೆಂದೇ ಹೇಳಬೇಕು.

ಇಂದು ಜಗತ್ತು ಗಡಿಬಿಡಿ ಮತ್ತು ಅವಸರದಲ್ಲಿದ್ದುಕೊಂಡು ದಾಪುಗಾಲಿಡುತ್ತ ಓಡುತ್ತಿದೆ. ವಿಜ್ಞಾನ – ತಂತ್ರಜ್ಞಾನದ ಈ ಯುಗದಲ್ಲಿ ಗೊತ್ತು ಗುರಿ ಇಲ್ಲದೆ ಆಯಾ ಜನಸಂಕುಲ ಎತ್ತವೋ ಸಾಗುತ್ತಿರುವುದು ಸಮಾಧಾನ ಚಿತ್ತದಿಂದ ನೋಡುವ ಜೀವಿಗಳಿಗೆ ಆಶ್ಚರ್ಯವನ್ನುಂಟುಮಾಡುವಂತಿದೆ. ಪ್ರಾಚೀನ ಕಾಲದಿಂದಲು ಒಡಮೂಡಿ

***Please cite this article as:*** ಮಹದೇವಪ್ರಸಾದ್, ಎಸ್.ಎಸ್. (2026). ಬೌದ್ಧ ಧರ್ಮ ಮತ್ತು ಡಾ. ಶರಣಬಸಪ್ಪ ಅಪ್ಪ ಅವರ ದಾಸೋಹ ಸೂತ್ರಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(6), 104–108

ಬಂದಿರುವುದನ್ನು ಜೀವನ ಮೌಲ್ಯಗಳ ಭರಾಟೆಯಿಂದ ಓಡುವ, ಜನತೆಯ ಕಣ್ಣಿಗೆ ಬಿದ್ದರೂ ಅವುಗಳ ಬಗ್ಗೆ ಇಂದಿನ ಜನಸ್ತೋಮ ಕಂಡು ಕಾಣದಂತೆ ಓಡುತ್ತಿರುವುದು ಬದುಕುವುದಕ್ಕೂ ಅಥವಾ ಬದುಕಿನಾಚೆಯ ಬೂದಗಟ್ಟಿಯತ್ತವೋ ತಿಳಿಯದಾಗಿದೆ. ಇಂತಹ ಸಂದರ್ಭದಲ್ಲಿಯೂ ಇದೆಲ್ಲ ವೈಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದ ಪೂಜ್ಯ ಅಪ್ಪ ಅವರು ತಮ್ಮ ದಿವ್ಯದೃಷ್ಟಿಯಿಂದ ಜನ ಬದುಕಲಿ, ಜೀವನ ಸುಗಮಗೊಳಿಸಿಕೊಳ್ಳಲಿ ಎಂದು ಹಗಲಿರುಳು ಚಿಂತೆ ಮಾಡಿ, 'ಸರ್ವಕಾಲಕ್ಕೂ ಸ್ವಾಗತಾರ್ಹವಾದ ಚಿಂತನಪರವಾದ ವೈಜ್ಞಾನಿಕತೆಯಿಂದ ಕೂಡಿದ ಸಹಬಾಳ್ವೆಗೆ ದಾರಿ ಮಾಡಿಕೊಡುವ, ಜೊತೆಗೆ ಬದುಕುವ ಮಾರ್ಗವನ್ನು ತೆರೆದು ತೋರಿಸುವ ಜ್ಞಾನಾಮೃತ ತುಂಬಿದ ಮಹಾದಾಸೋಹ ಸೂತ್ರಗಳನ್ನು ರಚಿಸಿ ಮತ್ತು ಮೌಲ್ಯಾಧಾರಿತ ಸಮಾಜ ರಚನಾ ಕ್ರಿಯೆಯಲ್ಲಿ ತೊಡಗಿ, ಮುಂದೆ ಸಾಗಿ ನಮ್ಮೆಲ್ಲರಿಗೂ ಆದರ್ಶಪ್ರಾಯರಾಗಿರುವ ಪೂಜ್ಯರು. "12ನೇಯ ಶತಮಾನದಲ್ಲಿ ಬಸವಾದಿ ಪ್ರಮಥರಿಂದ ಆಚರಣೆಯಲ್ಲಿ ತರಲಾಗಿದ್ದ ದಾಸೋಹದ ಪರಿಕಲ್ಪನೆಯನ್ನು 20ನೇ ಶತಮಾನದ ಅಗತ್ಯಗಳಿಗೆ ಸಮಂಜಸವಾಗುವ ರೀತಿಯಲ್ಲಿ ವ್ಯಾಪಕ ತಳಹದಿಯ ಮೇಲೆ "ಸರ್ವದರಲಿ ದಾಸೋಹ" ಎಂಬ ಹೊಸ ಪರಿಕಲ್ಪನೆಯನ್ನು ರೂಪಿಸಿದ ಪೂಜ್ಯ ಡಾ.ಶರಣಬಸಪ್ಪ ಅಪ್ಪ ಅವರು ಈ ಕಲ್ಪನೆಗೆ ಜೀವಕಳೆ ತುಂಬಿ "ಮಹಾದಾಸೋಹ ಸೂತ್ರಗಳು" ಎಂಬ ರೂಪದ ಸೂತ್ರಗಳಲ್ಲಿ ಅದನ್ನು ಬಂಧಿಸಿ ಪಂಡಿತರ ಮತ್ತು ಪಾಮರರ ನಾಲಿಗೆಯ ಮೇಲೆ ನಲಿಯುವ ರೀತಿಯಲ್ಲಿ ಹೆಣೆದಿದ್ದಾರೆ. "ಸರ್ವದರಲಿ ದಾಸೋಹ'ವೆಂಬ ವೈಶಿಷ್ಟ್ಯ ಪೂರ್ಣ ನೆಲೆಯ ಮೇಲೆ ನಿಂದು, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿ ಅದರಲ್ಲಿಯೇ ಪರಮಾತ್ಮನ ಸಚ್ಚಿದಾನಂದ ರೂಪವನ್ನು ಅನುಭವಿಸುವ ಕಲ್ಪನೆ ಅದ್ಭುತವಾದುದು; ಅಸಾಧಾರಣವಾದುದು. ಇದು ಪೂಜ್ಯ ಅಪ್ಪ ಅವರ ವೈಶಿಷ್ಟ್ಯ ಪೂರ್ಣವಾದ ದಾಸೋಹ ಕಲ್ಪನೆಯ ವಿರಾಟದರ್ಶನಿಕ ರೂಪ".

ಪೂಜ್ಯರ ಜೀವನಾನುಭವದಿಂದ ಮೂಡಿಬಂದ ಈ ಮಹಾದಾಸೋಹಗಳ ಪರಮಗುರಿ ವೀರಶೈವ ಸಂಪ್ರದಾಯಚರಣೆಯಲ್ಲಿ ಹುದುಗಿಕೊಂಡು ಶರಣ ತತ್ವಗಳನ್ನು ಮರೆಮಾಡಲು ಪ್ರಯತ್ನಿಸುತ್ತಿರುವವರ ನಡೆ ಮತ್ತು ನುಡಿಗಳಲ್ಲಿ ಹೊಸಕ್ರಾಂತಿಯನ್ನು ಮಾಡುವುದೇ ಈ ಮಹಾದಾಸೋಹ ಸೂತ್ರಗಳ ಒಳ ತಿರುಳಾಗಿದೆ. ಜೊತೆಗೆ ಅವುಗಳ ಮೂಲ ಉದ್ದೇಶವೂ ಆಗಿದೆ. ಒಂದೇ ಕಡೆಗೆ ಚಲಿಸುವ ಗುರು, ಲಿಂಗ, ಜಂಗಮಕ್ಕೆ ಭಕ್ತನು ತನು, ಮನ, ಧಮವನ್ನರ್ಪಿಸಿ ಕೃತಾರ್ಥನಾಗಬೇಕೆಂಬುದು ಒಂದು ಸೀಮಿತ ಕಾಲಘಟದ್ದಲ್ಲಿ ಎಂದು ತಿಳಿಯಬೇಕು. ಇದರ ಮುಂದುವರಿದು ಶಿವಶರಣರು ಹೇಳಿರುವ ಜೀವಪರವಾದ ಮಾತೆಂದರೆ ಸಕಲ ಜೀವಾತ್ರಮರಿಗೆ ಲೇಸು ಬಯಸಬೇಕೆಂದಿದ್ದಾರೆ. ಇದರ ಮುಂದುವರಿದ ಸಾಧನ ಕ್ರಮವೇ ಸಕಲ ಜೀವಗಳೆಲ್ಲರಿಊ ಒಳ್ಳೆಯದನ್ನು ಬಯಸುವುದರ ಜೊತೆಗೆ ಅವುಗಳಿಗೆ ನಾವು ಒಳ್ಳೆಯದನ್ನು ಮಾಡಿ ಪರಮಾತ್ಮನ ದರ್ಶನ ಪಡೆದುಕೊಳ್ಳಬೇಕೆಂಬುದೇ ಈ ತತ್ವಗಳ ಮಹಾದಾಸೋಹವಾಗಿದೆ.

ಮನುಷ್ಯಲೋಕದ ಮರ್ಮವನ್ನು ತಿಳಿದುಕೊಂಡ ಮಾನವ ತನ್ನ ಆಸೆ, ಸ್ವಾರ್ಥ, ದರ್ಪ, ಅಹಂಕಾರಗಳಿಂದ ಮೋಸ ವಂಚನೆಯನ್ನು ಮಾಡಲು ಮನಸ್ಸು ಮಾಡಿ ದುರ್ಮಾರ್ಗಕ್ಕಿಳಿಯುತ್ತಾನೆ. ಕೆಟ್ಟ ಕರ್ಮಗಳನ್ನು ಮಾಡಿ ಪಾಪದ ಕೂಪದಲ್ಲಿ ಬಿದ್ದು ಒದ್ದಾಡುತ್ತಾನೆ. ಚೆನ್ನಾಗಿ ಬದುಕಬೇಕೆಂಬುದರ ಕಡೆಗೆ ಗಮನವನ್ನು ಕೊಡದೆ ಭೋಗೋಪಭೋಗವನ್ನು ನಡೆಸುವುದಕ್ಕೆ ಮನಸ್ಸು ಕೊಟ್ಟು ಆಸೆಯೆಂಬ ಕುದುರೆಯನ್ನೇರಿ ಗೊತ್ತು ಗುರಿ ಇಲ್ಲದ ಕಡೆಗೆ ಪ್ರಯಾಣ ಬೆಳೆಸುತ್ತಾನೆ. ಮಾಡಬಾರದೆಲ್ಲವನ್ನು ಮಾಡಿ ತನ್ನ ಸಮಾಧಿಯನ್ನು ತಾನೇ ತೋಡಿಕೊಳ್ಳುತ್ತಾನೆ. ಸಾರ್ಥಕ ಜೀವನವನ್ನು ಸವೆಸಲು ಬಂದಿರುವ ಮಾನವ ಮೃಗದಂತೆ ಬದುಕ

ಸಾಗಿಸಿ ಬಾಳು ಬರಿದು ಮಾಡಿಕೊಳ್ಳುತ್ತಾನೆ. ಇದನ್ನು ತಮ್ಮ ದಿವ್ಯದೃಷ್ಟಿಯಿಂದ ಗಮನಿಸಿದ ಹಿರಿಯ ಚೇತನ ಪೂಜ್ಯ ಡಾ.ಅಪ್ಪ ಅವರು ತಮ್ಮ ದಾಸೋಹ ಸೂತ್ರಗಳನ್ನು ಬಿಡಿಸುವುದರ ಮೂಲಕ ಮತಿಹೀನನಾದ ಮಾನವನಿಗೆ ಮತಿವಂತನಾಗಿ ಜೀವಿಸಲು ಪ್ರೇರೇಪಿಸುತ್ತಾರೆ. ಸುಖಮಯ ಜೀವನದತ್ತ ಕೈನೀಡಿ ಕರೆದುಕೊಂಡು ಹೋಗುವುದರ ಜೊತೆಗೆ ಪ್ರಯತ್ನಶೀಲವಾಗಿ ಮುಂದೆ ಸಾಗು ಎಂದು ಭೋದಿಸುತ್ತಾರೆ. ಜಡತ್ವಗಳಿಂದ ತುಂಬಿದ ನಿನ್ನ ಶರೀರ ಮತ್ತು ಮನಸ್ಸನ್ನು ಸ್ವಚ್ಛಗೊಳಿಸಿಕೊಂಡು, ಸುಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಿವಚಿಂತನವನ್ನು ಸದಾ ಮಾಡುತ್ತ ಪರಮಾತ್ಮನ ದರ್ಶನವನ್ನು ಪಡೆಯುವಂತಾಗು ಎಂದಿದ್ದಾರೆ. ಮುಂದುವರಿದು ನಮ್ಮ ಆತ್ಮ ಮತ್ತು ಪರಮಾತ್ಮನ ನಡುವೆ ಸೂಕ್ಷ್ಮ ಸ್ಥಳದ ನಡುವೆ ಅಡ್ಡಗೋಡೆಯೊಂದು ನಿರ್ಮಾಣವಾಗಿ ನಿಂತಿದೆ. ಮಮಕಾರಗಳಿಂದ ಕೂಡಿದ ಈ ಗೋಡೆಯ ಹಂದರವನ್ನು ಹರಿದು ಸಾಕಾರಮೂರ್ತಿ ಚಿದಾನಂದ ದರ್ಶನವನ್ನು ಪಡಯುವುದು ಮಾನವನ ಪರಮ ಗುರಿಯಾಗಬೇಕೆಂದು ತಮ್ಮ ದಾಸೋಹ ಸೂತ್ರದ ಮೂಲಕ ಅರುಹಿದ್ದಾರೆ.

***"ಕಬ್ಬಿನ ಮೇಲೆ ಜೇನಿಟ್ಟಿತೆಂಬುರು***
***ಅವು ಒಂದರ ಸಹಿಯನೊಂದರಿಯಟ್ಟಿವು***
***ಭಕ್ತ – ಜಂಗಮದ ನಡುವೆ***
***ಅರ್ಥ ಪ್ರಾಣ ಅಭಿಮಾನವೆಂಬ ಸಿಗುರು ಕಾಡಿತ್ತು***
***ಕಾಣಾ ಕೂಡಲ ಸಂಗಮದೇವ***
***ಈ ಅಹಂಕಾರವೆಂಬ ಸಿಗುರು ತೆಗೆಯಲು***
***ನಿರಹಂಕಾರದೊಳಗೆ ದಾಸೋಹ ಧರ್ಮವ***
***ಕರುಣಿಸದರಯ್ಯ"***

ಲೋಕ ಹಿತವನ್ನು ಬಯಸಿ ಅದರ ಶ್ರೇಯೋಭಿವೃದ್ದಿಗಾಗಿ ಹಗಲಿರುಳೂ ದುಡಿದ ಜಗತ್ತಿನ ಮಹಾ ಮಾನವತಾವಾದಿಗಳು ಬೋಧಿಸಿದ್ದು ದೇವರ ದರ್ಶನವನ್ನು ಪಡೆದು ಕೊಳ್ಳಬೇಕಾದರೆ ಭಕ್ತನು ಅಹಂಕಾರಿಯಾಗಿರಬಾರದು. ಸಮಾಧಾನಿಯಾಗಿದ್ದು ತನ್ನ ಮನಸ್ಸನ್ನು ಅಂಕಿತದಲ್ಲಿಟ್ಟುಕೊಂಡು ಧ್ಯಾನ ತಪಸ್ಸುಗಳ ಮೂಲಕ ಹಂತ ಹಂತವಾಗಿ ಸಾಧನೆಯ ಮೆಟ್ಟಿಲುಗಳನ್ನು ಹತ್ತಿದವರ ಇಲ್ಲವೆ ಸತ್ಯದ ದರ್ಶನ ಪಡೆಯಬೇಕೆಂದಿದ್ದಾರೆ.

***"ತಾನಿಲ್ಲದೆ ಮಾಡುವುದು ಕಾಯಕವಾಗಿ ಅಹಂಕಾರವ ಕೆಡೆಸಿತ್ತು***
***ತಾನಿಲ್ಲದೆ ನೀಡುವುದ ದಾಸೋಹವಾಗಿ ಅಹಂಕಾರವ ಬಿಡಿಸತ್ತು***
***ತಾನಿಲ್ಲದೆ ಭಕ್ತಿಯಿಂದ ಪಡೆದುದು ಸಹಜ ಪ್ರಸಾದವಾಗಿ ಪರಿಣಮಿಸಿತ್ತು"***

ಎಂಬ ಮಹಾದಾಸೋಹ ಸೂತ್ರದ ಸಾಲುಗಳು ಕಾಯಕ, ದಾಸೋಹ ಮತ್ತು ಪ್ರಸಾದದ ಮೂಲ ಪರಿಕಲ್ಪನೆಯ ಸಹಜ ಗುಣಗಳಲ್ಲಿ ಒಂದಾದ ಅಹಂಕಾರದ ಬಳಕೆಯಿಂದಾಗಿ ಕಾಯಕ, ದಾಸೋಹ ಮತ್ತು ಪ್ರಸಾದಗಳು ಮನಸ್ಸು ಹೊಳೆಯುವುದಕ್ಕೆ ಹೇಗೆ ಅಹಂಕಾರ ತೊಡಕಾಗುತ್ತದೆ ಅನುಭಾವದ ನುಡಿಗಳು ಸಾಮಾನ್ಯ ಜನತೆಗೂ ತಿಳಿಯುವ ರೀತಿಯಲ್ಲಿವೆ. ಇಂತಹ ಮೌಲ್ಯಿಕರವಾದ ನೂರಾರು ನುಡಿಗಡನಗಳು ಈ ಮಹಾದಾಸೋಹ ಸೂತ್ರಗಳಲ್ಲಿ ಸೂತ್ರಬದ್ಧವಾಗಿ, ವಿಚಾರ ಪರವಾಗಿ ಪ್ರವಹಸಿರುವುದರಿಂದ ವಿಶ್ವಮಾನ್ಯವಾಗಿವೆ. ಇಂತಹ ವಿಶ್ವಮಾನವ ಸಂಬಂಧವನ್ನು ಬೆಳೆಸುವ ಮಹಾದಾಸೋಹ ಸೂತ್ರಗಳನ್ನು ವಿಶ್ವದ ಮಹಾಪ್ರಸಾದಿ ಮತ್ತು ಮಹಾಮಾನವತಾವಾದಿಗಳ ಮೌಲ್ಯೀಕ ವಿಚಾರಗಳ ಜೊತೆಗೆ ಸಂಬಂಧವನ್ನು ಕಲ್ಪಿಸಿ ತೆರೆದ ಮನಸ್ಸಿನಿಂದ ಅಧ್ಯಯನ ಮಾಡುವ ಅಗತ್ಯವಿದೆ. ಈ ಅಂಶವನ್ನು ಗಮನಿಸಿಯೇ ಇಲ್ಲಿ ಮಹಾದಾಸೋಹ ಸೂತ್ರಗಳು ಮತ್ತು ಬೌದ್ಧಧರ್ಮದ ಮಾನವೀಯ ಮತ್ತು ಆದರ್ಶ ವಿಚಾರ ಮೌಲ್ಯಗಳೇನೆಂಬುದನ್ನು ತಿಳಿಯಬಹುದಾಗಿದೆ.

ಮಾನವಲೋಕದ ಮನದ ಮೈಲಿಗೆಯನ್ನು ತೊಳೆದು, ಈ ಭೂಮಿಯ ಮೇಲೆ ಜೀವಿಸುವ ಪ್ರತಿಯೊಂದು ಜೀವಿಗೂ ಜೀವಿಸುವುದಕ್ಕೆ ಮೂಲ

ಭೂತ ಹಕ್ಕಿದೆ. ಇದು ಶ್ರೇಷ್ಠ ಅದು ಕನಿಷ್ಠ ಎಂದು ಭೇದ-ಭಾವ ಮಾಡುವುದು ಮಾನವನಿಗೆ ಶೋಭಿಸುವಂಥದಲ್ಲ. ಸತ್ಯದ ಮೂಲವನ್ನು ತಿಳಿದುಕೊಂಡಿರುವ ಬುದ್ದಿಜೀವಿಗಳು ಆ ಸತ್ಯದ ದರ್ಶನವನ್ನು ಸಾಮಾನ್ಯ ಜನತೆಗೂ ಮಾಡಿಸಿಕೊಡಬೇಕಾಗಿತ್ತು. ಆದರೆ ಬುದ್ಧಿಜೀವಿಗಳ ಮನಸ್ಸಿನಿಂದ ಬ್ರಾಹ್ಮಣ್ಯ ಸೇರಿಕೊಂಡು ಸೂಕ್ಷ್ಮವಾಗಿ ಕೆಲಸ ಮಾಡಿರುವುದರಿಂದ ಹೇಗೆ ತರ-ತಮ-ಭಾವನೆಗಳ ಜನ್ಮತಾಳಿ ಹೆಮ್ಮರವಾದುವೆಂದು ಹೇಳಬಹುದು. ಈ ಬ್ರಾಹ್ಮಣದ ನೆರಳಿನಲ್ಲಿ ಆಶ್ರಯ ಪಡೆದುಕೊಂಡ ಪಂಡಿತ ವರ್ಗ ಸಮಾಜವನ್ನು ವ್ಯವಸ್ಥಿತವಾಗಿ ಒಡೆದು ಆಳಲು ಪ್ರಾರಂಭಿಸಿದುದುರ ಫಲವಾಗಿ ಜಾತಿಯೂ ಹುಟ್ಟುವುದಕ್ಕೆ ಕಾರಣವಾಯಿತೆಂದು ಹೇಳಬಹುದು. ಹೇಗೆ ಪೂಜ್ಯ ಅಪ್ಪ ಅವರು 21ನೇ ಶತಮಾನದ ಮಾನವನ ಚಲನ ವಲನವನ್ನು ಗಮನಿಸಿ ಮಹಾದಾಸೋಹ ಸೂತ್ರಗಳನ್ನು ರಚಿಸಿದರೋ, ಹಾಗೆಯೇ ಕ್ರಿ.ಪೂ. 6ನೇ ಶತಮಾನದಲ್ಲಿಯೇ ವಿಶ್ವಬಂಧು ಮಹಾಮಾನವತಾವಾಗಿ ಗೌತಮ ಬುದ್ಧನು ಒಡೆದು ಛಿದ್ರವಾಗಿರುವ ಭಾರತ ದೇಶದ ಸಾಮಾಜಿಕ ಸ್ಥಿತಿ-ಗತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದನು. ಹೀಗಾಗುವುದಕ್ಕೆ ಮೂಲ ಕಾರಣ ಮಾನವನ ಮನಸ್ಸು ಎಂದು ಹೇಳುತ್ತ ಅದನ್ನು ತನ್ನ ಅಂಕಿತದಲ್ಲಿಟ್ಟುಕೊಳಬೇಕೆಂದನು. ದುಃಖವನ್ನು ನೀಗಿಸಿಕೊಳ್ಳಲು ಆಶೆಯನ್ನು ಬಿಡಬೇಕೆಂದು ಹೇಳುವುದರ ಜೊತೆಗೆ ಅದರ ವಿವಿಧ ಮುಖಗಳನ್ನು ಕುರಿತ ವಿವೇಚಿಸಿದನು. ದುಃಖದ ಮೂಲವನ್ನು ಕಂಡುಹಿಡಿಯಲು ಕಾಡಿಗೆ ಹೋಗಿ ತಪಸ್ಸು ಮಾಡಿ ಧ್ಯಾನಾಸಕ್ತನಾಗಿ ಜ್ಞಾನದ ಒಂದೊಂದೇ ಮೆಟ್ಟಿಲುಗಳನ್ನು ಮೆಟ್ಟಿ ಮನುಷ್ಯ, ಮನಸ್ಸು ಮತ್ತು ಆತನ ದೃಷ್ಟಿಕೋನಗಳನ್ನು ಕುರಿತು ಸಮಾಲೋಚಿಸಿದನು. ಪರಿಪೂರ್ಣ ಜ್ಞಾನ ದಾಸೋಹಿ ಗೌತಮ ಬುದ್ಧ ತನಗಾದ ಸತ್ಯದ ದರ್ಶನವನ್ನು ಜನಸಾಮಾನ್ಯರೆಲ್ಲರಿಗೂ ತನ್ನ ವಚನಗಳ ಮೂಲಕ ತಿಳಿಯಪಡಿಸಿದ್ದಾನೆ. ಕಲ್ಯಾಣ ನಾಡಿನ ಶಿವಶರಣರಂತೆ ದೇವ ಭಾಷೆಯಾಗಿರುವ ಸಂಸ್ಕೃತವನ್ನು ಸ್ವಲ್ಪ ಬದಿಗೆ ಸರಿಸಿ ಜನಸಾಮಾನ್ಯರು ಮಾತನಾಡುವ ಪಾಲಿ ಭಾಷೆಯನ್ನು ಆಯ್ಕೆ ಮಾಡಿಕೊಂಡು ಸಾವಿರಾರು ವಚನಗಳ ಮೂಲಕ ತಾನು ಕಂಡ ಸತ್ಯವನ್ನು ಸಾರಿದ್ದಾನೆ. ಅಂತಹ ಮೌಲ್ಯಿಕ ವಚನಗಳ ವಿಚಾರ ಮತ್ತು ಪೂಜ್ಯ ಡಾ.ಶರಣಬಸಪ್ಪ ಅಪ್ಪ ಅವರು ರಚಿಸಿದ ಮಹಾದಾಸೋಹ ಸೂತ್ರಗಳ ಮೌಲ್ಯಿಕ ವಿಚಾರಗಳ ಕುರಿತು ನಾವು ಇಂದು ಚಿಂತನ-ಮಂಥನ ಮಾಡುವುದು ಅವಶ್ಯವಾಗಿದೆ.

ವಿಶ್ವ ಸಂಸ್ಕೃತಿಗೆ ಹಿಡಿದ ಕೈಗನ್ನಿಡಿಯಂತಿರುವ ಈ ಮಹಾದಾಸೋಹ ಸೂತ್ರದ ವ್ಯಾಪ್ತಿ ಬಹಳ ವಿಶಾಲವಾದುದು, ಅರ್ಥಪೂರ್ಣವಾದುದು. ಮನದ ಒಳಗೆ ಮನೆಯ ಹೊರಗೆ ಹಚ್ಚಿಟ್ಟ ದೀಪ ನಮ್ಮ ಮನಸ್ಸಿನ ಒಳಗೆ ಇರುವ ಕತ್ತಲನ್ನು ಹೊಡೆದೋಡಿಸುತ್ತದೆ. ಮನೆಯ ಹೊರಗಿನ ದೀಪ ಕತ್ತಲೆಯಲ್ಲಿರುವರಿಗೆ ಬೆಳಕನ್ನು ನೀಡುತ್ತದೆ. ನಾನೆಂಬ ಮಮಕಾರವನ್ನಳಿದು ಎಲ್ಲವೂ ಶಿವಮಯ ಎಂಬ ಸಮರ್ಪಣ ಭಾವ ಬಂದಾಗಲೇ ನಾವು ಅರಿವುಳ್ಳವರಾಗುತ್ತೇವೆ. ಈ ಅರಿವೆ ಗುರುವನ್ನಾಗಿಸಿಕೊಂಡು ಮುಂದೆ ಸಾಗಿದರೆ ಜೊತೆಗೆ ಈ ಪ್ರತಿಭೆಯ ಸಾರ ಸವಿಯನ್ನು ದಾಸೋಹ ಭಾವದಿಂದ ಪ್ರಸಾದವಾಗಿಸಿಕೊಂಡಾಗ ಮಾತ್ರ ವಿಶ್ವಶಾಂತಿ ಸಾಧ್ಯ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಇಂಥವೇ ಮಾತುಗಳನ್ನು ಗೌತಮ ಬುದ್ಧ ಒಂದು ಕಡೆಗೆ ಹೀಗೆ ಹೇಳಿದ್ದಾನೆ. "ಭಿಕ್ಷು ತನ್ನ ಸಾಧನೆಯ ಮಾರ್ಗದಲ್ಲಿ ನಡೆದು ತನ್ನನ್ನೇ ತಾನು ದೀಪವನ್ನಾಗಿ ಮಾಡಿಕೊಳ್ಳಬೇಕು" ಎಂದು ಹೇಳುವುದರ ಜೊತೆಗೆ ಬೇಡಿದವರಿಗೆ ಬೇಡಿದ್ದನ್ನು ಕೊಡು. ಇಲ್ಲ ಎನ್ನಬೇಡ ನಿನ್ನ ಮನೆಗೆ ಯಜಮಾನ ಬಂದು ಸಂಪಾದಿಸಿದ (ಜ್ಞಾನವನ್ನು) ಪುಣ್ಯದಲ್ಲಿ ಸ್ವಲ್ಪ ಭಾಗವನ್ನು ಕೊಡಲು ಕೇಳಿದ್ದಾನೆ. ಅದಕ್ಕೆ ಅನ್ನ ಭಾರ ಸುಮನಿಗೆ ಜ್ಞಾನದಾಸೋಹಕ್ಕೆ

ಸಂಬಂಧಿಸಿದ ವಿಚಾರಧಾರೆ ಎರೆ. ಏಕೆಂದರೆ "ಒಂದು ನೂರ ಮನೆಗಳುಳ್ಳ ಒಂದು ಹಳ್ಳಿಯಲ್ಲಿ ಒಂದೇ ಒಂದು ದೀಪವಿದ್ದಿತು. ನೆರೆಮನೆಯವನೊಬ್ಬ ಬಂದು ಒಂದು ಪಣತಿಗೆ ದೀಪವನ್ನು ಬೆಳಗಿಸಿಕೊಂಡ, ಇದೇ ರೀತಿ ದೀಪವು ಮನೆಯಿಂದ ಮನೆಗಳಿಗೆ, ಮುಟ್ಟಿತು, "ಈ ರೀತಿಯಾಗಿ ಮೂಲದ ದೀಪದ ದೀಪ್ತಿ ಒಂದು ಚೂರು ಕಡಿಮೆಯಾಗದೆ. ಸಾವಿರ ದೀಪಗಳು ಬೆಳಗುವಂತಾಯಿತು. ಹಾಗೆಯೇ ಸಕಲ ಜೀವಾತ್ಮರಿಗೆ ಲೇಸನು ಬಯಸುವ ಧರ್ಮದ ಪ್ರಭೆಯು ಎಲ್ಲಾ ಕಡೆಗೂ ಬೆಳಗುತ್ತಲಿರುತ್ತವೆ.

**ಪರಾಮರ್ಶನ ಗ್ರಂಥಗಳು**


- ಚಂದ್ರಯ್ಯ, ಬಿ.ನಂ. (2007). *ಕನ್ನಡದಲ್ಲಿ ಬುದ್ಧ.* ಸಂವಹನ.
- ನಂದಿಮಠ, ಎಸ್. ಸಿ. (1982). *ಕರ್ನಾಟಕ ಧರ್ಮಗಳು.* ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ, ಕರ್ನಾಟಕ ಸರ್ಕಾರ.
- ಪಂಡಿತ ತಾರನಾಥ. (1982). *ಧರ್ಮಸಂಭವ.* ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ, ಕರ್ನಾಟಕ ಸರ್ಕಾರ.
- ಪ್ರಭುಶಂಕರ (ಪ್ರ.ಸಂ). (2003). *ವಿಶ್ವಧರ್ಮ ದರ್ಶನ (ಸಂ–1).* ಜಗದ್ಗುರು ಶ್ರೀಶಿವರಾತ್ರೀಶ್ವರ ಗ್ರಂಥಮಾಲೆ
- ಯಳನಾಡು ಅಂಜನಪ್ಪ. (2008). *ಧರ್ಮ ಮತ್ತು ಮುಕ್ತ ವಿಚಾರ.* ಕನ್ನಡ ವಿಶ್ವವಿದ್ಯಾಲಯ.